# ದೀರ್ಘ ಕಥೆ ಬೋರ್ ಆಗುತ್ತೆ

**ರಾಜೇಶ್ ನಟರಂಗ**

**ಉದಯದ 'ನಾನು ನನ್ನ ಕನಸು'ವಿನ ಶಂಕರ್**

◆ **ನಟರಂಗ ಆಗಿದ್ದು ಹೇಗೆ?**

'ನಟರಂಗ' ತಂಡದಲ್ಲಿದ್ದೆ. ಅದನ್ನು ನಾಮಕರಣ ಮಾಡಿದ್ದು ಬಿ. ಸುರೇಶ್. ಅವರ ಸಿನಿಮಾ ಮಾಡುವಾಗ ರಾಜೇಶ್ ಜೊತೆ ನಟರಂಗವನ್ನೂ ಸೇರಿಸಿದರು. ಅವರ ಗುರುತಿಸುವ ಉದ್ದೇಶ ನನಗೊಂದು ಅನನ್ಯತೆಯನ್ನು ತಂದುಕೊಟ್ಟಿದೆ. ನಟರಂಗದಲ್ಲಿ ಸಿ.ಆರ್. ಸಿಂಹ, ಲೋಕೇಶ್, ಲೋಕನಾಥ್, ವೆಂಕಟರಾಮ್ ಅವರೆಲ್ಲ ನಟಿಸಿದ್ದರೂ ನನಗೆ ಆ ಭಾಗ್ಯ ಸಿಕ್ಕಿದೆ. ಈಗಲೂ ಆ ತಂಡದವರೇನಾದರೂ ಸಿಕ್ಕರೆ 'ನಮ್ಮ ತಂಡದ ಹೆಸರನ್ನು ನೀನಾದರೂ ಮೆರೆಸುತ್ತಿದ್ದೀಯಾ?' ಎನ್ನುತ್ತಾರೆ. ಅದು ಒಂದು ರೀತಿಯ ಖುಷಿ ಕೊಡುತ್ತದೆ.

◆ **ದೆಹಲಿಗೆ ಹೋದವರು ಹಾಗೆಯೇ ಮರಳಿದ್ದೇಕೆ?**

ದೆಹಲಿಗೆ ಒಂದು ನಾಟಕದ ಕೆಲಸಕ್ಕೆ ಹೋಗಿದ್ದೆ. 'ಲಿಜೆಂಡ್ ಆಫ್ ರಾಮ್ ಪ್ರಿನ್ಸ್ ಆಫ್ ಇಂಡಿಯಾ' ಎಂಬ ನಾಟಕಕ್ಕೆ ಅಲ್ಲಿನ ಚಾಣಕ್ಯಪುರಿ ಎನ್ನುವ ಸ್ಥಳದಲ್ಲಿ ವೇದಿಕೆ ಸಿದ್ಧವಾಗಿತ್ತು. ಅಮೀರ ರಾವ್ ನಿರ್ದೇಶನ ಮಾಡಿದ್ದರು. ರಂಗಭೂಮಿಯಲ್ಲಿ ಅವರದು ದೊಡ್ಡ ಹೆಸರು. ಒಂದು ಕಿಮೀ ಅಷ್ಟು ಉದ್ದದ ವೇದಿಕೆ. ಅದನ್ನು ರೈಲ್ವೇ ಹಳಿ ರೂಪದ ತಳಹದಿಯ ಮೇಲೆ ಸಿದ್ಧಪಡಿಸಿದ್ದರು. ವೇದಿಕೆ ಚಲನೆ ಆಗುತ್ತಿತ್ತು. ಪ್ರೇಕ್ಷಕರು ಕೂಡ ಮುಖ್ಯವಾದ ದೃಶ್ಯ ಮುಗಿದ ನಂತರ ಮತ್ತೊಂದು ದೃಶ್ಯಕ್ಕೆ ಸ್ಥಳಾಂತರ ಆಗುತ್ತಿದ್ದರು. ಪುಷ್ಪಕ ವಿಮಾನ ಕ್ರೇನ್‌ನಲ್ಲಿ ವಿಮಾನ ಮಾಡಿ ಮೇಲೆ ಹಾರಾಡಿಸಿ ಆಮೇಲೆ ಮಾಯ ಮಾಡಲಾಗುತ್ತಿತ್ತು. ವೇದಿಕೆ ಹಿಂದಿನ ಸಿದ್ಧತೆ ಮತ್ತು ರಾಮನಿಗೆ ಜೈ ಎಂದು ಕೂಗುವುದು ನಮ್ಮ ಕೆಲಸವಾಗಿತ್ತು. ಒಂದು ತಿಂಗಳು ಆ ಕೆಲಸವನ್ನು ಮಾಡಿದೆವು. ಆಗ ಎಲ್ಲ ಹೊಸತು, ಒಳ್ಳೆಯ ಅನುಭವವನ್ನು ಅದು ನೀಡಿತು. ಅಲ್ಲಿ ಉಳಿದುಕೊಳ್ಳುವ ಉದ್ದೇಶ ಇರಲಿಲ್ಲ ಅದಕ್ಕೆ ಮರಳಿ ಬಂದೆವು.

◆ **ನಿರ್ಮಾಣ ವ್ಯವಸ್ಥಾಪಕ, ಸಹನಿರ್ದೇಶನ, ನಟ, ಬರಹಗಾರ... ಹೀಗೆ ಏನೇನೋ ಮಾಡಿದ್ದೀರಿ ಏನು ಮಾಡಿಲ್ಲ, ಏನು ಮಾಡಬೇಕು?**

ಎಲ್ಲ ಪಾಪಿ ಪೇಟ್‌ಕಾ ಸವಾಲ್. ಮೂಲತಃ ನಾನು ನಟನಾಗಿ ಪ್ರವೇಶ ಮಾಡಿದ್ದೇನೆ. ನಟನಾದಾಗ ಈ ಡೈಲಾಗ್ ಹೀಗೆ ಬರೀಬಾರದಿತ್ತು ಎಂದು ಅನ್ನಿಸುತ್ತಿತ್ತು. ಆ ದೃಷ್ಟಿಯಲ್ಲಿ ಒಂದು ಪ್ರಯೋಗಾತ್ಮಕ ಪ್ರಯತ್ನ ಎಂದು ಡೈಲಾಗ್ ಬರೆದಿದ್ದೇನೆ. ಚಿತ್ರಕತೆ ರೂಪಿಸಿದ್ದೇನೆ. ಹೀಗೆ ಬೇರೆ ಬೇರೆ ಕ್ಷೇತ್ರಗಳನ್ನು ಪ್ರವೇಶ ಮಾಡಿದ್ದಿದೆ. ಆದರೆ ನಟನಾಗಿಯೇ ಬಂದು ನಟನಾಗಿಯೇ ಉಳಿಯುವ ನಾನು ಇನ್ನಷ್ಟು ಭಿನ್ನ ಪಾತ್ರಗಳನ್ನು ಮಾಡಬೇಕು. ಪಾತ್ರದ ಒಳ ಹೊಕ್ಕು ಕೆಲವೊಂದು ಸೂಕ್ಷ್ಮಗಳನ್ನು ಪ್ರತಿಫಲಿಸಬೇಕು, ನಿರ್ಮಾಣ ಮಾಡಬೇಕು, ತುಂಬ ಕನಸುಗಳಿವೆ. ಏನೋ ಮಾಡುತ್ತೇನೆ ಎನ್ನುತ್ತಾ ಅದೇ ದುಡ್ಡು ಮಾಡ್ತೀನಾ? ಗೊತ್ತಿಲ್ಲ. ಹಾಗೆಂದು ದುಡ್ಡು ಮಾಡುವುದು ಅಪರಾಧ ಏನೂ ಅಲ್ಲ. ಏನೇ ಮಾಡಿದರೂ ಇಲ್ಲೇ ಮಾಡಬೇಕು.

◆ **ಪಾತ್ರದ ಬಗ್ಗೆ ಹೇಳಿ?**

ನನ್ನದು ನಾಯಕಿಯ ಅಪ್ಪನ ಪಾತ್ರ. ಮಗಳ ಬಗ್ಗೆ ಅಪಾರ ಕನಸು ಹೊತ್ತಿರುವ ಪಾತ್ರ. ನಿಜ ಜೀವನದಲ್ಲಿ ನಾನು ಹಾಗಿಲ್ಲ. ನನಗೂ ಮಗಳೊಬ್ಬಳಿದ್ದಾಳೆ. ಅವಳಿಂದ ಸಮಾಜಕ್ಕೆ ಏನಾದರೂ ಒಳ್ಳೆಯದಾದರೆ ಸಂತೋಷ. ಆದರೆ ನಾನು ಇದೇ ಆಗಬೇಕು ಎಂದು ಅವಳಿಗೆ ಹೇಳಿಲ್ಲ. ಆದರೆ ಇಲ್ಲಿ ಅಪ್ಪ ಮಗಳನ್ನು ವೈದ್ಯೆ ಮಾಡಬೇಕು ಎನ್ನುವ ಬಯಕೆ ಹೊಂದಿದ್ದಾನೆ. ಅವನಿಗೆ ತಾನು ಡಾಕ್ಟರ್ ಆಗಬೇಕು ಎನ್ನುವ ಕನಸಿತ್ತು. ಅದು ಸಾಧ್ಯ ಆಗದೆ ಯಾರದೋ ದೊಡ್ಡ ಮನೆಯಲ್ಲಿ ಅಡುಗೆಭಟ್ಟನಾಗಿ ಕೆಲಸ ಮಾಡುತ್ತಿರುತ್ತಾನೆ. ಆದರೆ ತನ್ನ ಮಗಳಿಗೆ ಒಮ್ಮೆ ಬಾಯಿ ತಪ್ಪಿ ಡಾಕ್ಟರ್ ಎಂದು ಹೇಳಿರುತ್ತಾನೆ. ಆಕೆ ಕೂಡ ಅದನ್ನೇ ನಂಬಿರುತ್ತಾಳೆ. ತನಗೆ ಏನೇ ಆದರೂ ನಮ್ಮ ಅಪ್ಪ ಗುಣಪಡಿಸುತ್ತಾರೆ. ತನ್ನ ತಂದೆಯಂತೆ ತಾನೂ ಡಾಕ್ಟರ್ ಆಗಬೇಕು ಎಂದು ಹೇಳುತ್ತಾಳೆ. ಆತ ತನ್ನ ಕನಸ್ಸನ್ನೇ ಆಕೆಯ ಮನಸ್ಸಿನಲ್ಲಿ ಬಿತ್ತಿದ ಪರಿಣಾಮ ಅದು ಅವಳಲ್ಲಿ ಹುಟ್ಟಿಕೊಂಡಿರುತ್ತದೆ. ಒಮ್ಮೆ ತನ್ನ ಅಪ್ಪ ಡಾಕ್ಟರ್ ಅಲ್ಲ ಎನ್ನುವುದು ಆಕೆಗೆ ಗೊತ್ತಾಗುತ್ತದೆ. ಆದರೆ ಅದನ್ನು ಹೇಗೆ ತೆಗೆದುಕೊಳ್ಳುತ್ತಾಳೆ ಎನ್ನುವ ಕುತೂಹಲ ಒಂದು ಘಟ್ಟದಲ್ಲಿರುತ್ತದೆ. ಮಗಳು ತನ್ನ ತಂದೆಗೆ ನಿನ್ನ ಕನಸು ನೆರವೇರಿಸುತ್ತೇನೆ. ಎಲ್ಲ ನಿನ್ನನ್ನು ಡಾಕ್ಟರ್ ಅಪ್ಪ ಎಂದು ಹೇಳಬೇಕು ಹಾಗೆ ಆಗುತ್ತೇನೆ ಎಂದು ಹೇಳುತ್ತಾಳೆ. ಒಂದು ದಿನ ಅಪ್ಪ ಸತ್ತೇ ಹೋಗುತ್ತಾನೆ. ಮಗಳು ಏನಾಗುತ್ತಾಳೆ ಎನ್ನುವುದು ಕಥೆ.

◆ **ರಂಗಭೂಮಿ, ಸಿನಿಮಾ ಜತೆ ಟೀವಿ ನೋಡಿದರೆ...**

ತಾಂತ್ರಿಕವಾಗಿ ಟೀವಿ ತುಂಬ ಸಾಧಿಸಿದೆ. ಟೀವಿಯಲ್ಲಿ ಆರಂಭದಿಂದ ನಟಿಸಿದ್ದರಿಂದ ಅದೆಲ್ಲ ಗೊತ್ತಾಗುತ್ತದೆ. ಈಗ ಸಿನಿಮಾ ರೀತಿಯಲ್ಲೇ ಅದ್ಧೂರಿಯಾಗಿ ಮಾಡಲಾಗುತ್ತದೆ. ಟೀವಿಗೆ ಅದರದೇ ಆದ ಕಟ್ಟುಪಾಡುಗಳಿವೆ. ಆ ಪಟ್ಟಿಗೆಯಲ್ಲಿ ಏಕತಾನತೆ ಕಾಡಲು ಶುರುವಾಗುತ್ತದೆ. ಜನ ಒಮ್ಮೆ ನೋಡಿದರೆ ಅದನ್ನು ಮುಂದುವರಿಸುತ್ತಾರೆ ಎನ್ನುವ ಮಿತ್ ಧಾರಾವಾಹಿ ಮಾಡುವವರಿಗೆ ಇರುತ್ತದೆ. ಅದನ್ನು ಜನ ನೋಡುತ್ತಾರೆ ಇಲ್ಲವೋ ಎನ್ನುವ ಖಚಿತ ಅರಿವು ಇರುವುದಿಲ್ಲ. ಟೀವಿ ಲೋಕದ ಲೆಕ್ಕಾಚಾರದ ಗ್ರಾಫ್ ಅದನ್ನು ನಿಯಂತ್ರಿಸುತ್ತದೆ. ವೈಯಕ್ತಿಕವಾಗಿ ನನಗೆ ಏನು ಅನ್ನಿಸುತ್ತದೆ ಎಂದರೆ ಟೀವಿಯಲ್ಲಿ ದೀರ್ಘವಾಗಿ ಕಥೆಯನ್ನು ಎಳೆಯಬಾರದು. ಅದಕ್ಕೆ ಪರಿಮಿತ ಇರಬೇಕು. ಆರಂಭದಲ್ಲಿ ಇದ್ದ ಸೂಕ್ಷ್ಮತೆ ಪೋಷಿಸಿಕೊಂಡು ಹೋಗುವಂತಿರಬೇಕು. ಹೇಳಿದ್ದೇ ಹೇಳುತ್ತಾ, ಮಾಡಿದ್ದೇ ಮಾಡುತ್ತಿರುವುದು ವೀಕ್ಷಕನಿಗೂ ಬೋರ್ ಹೊಡೆಸುತ್ತದೆ. ಆಗ ಹೊಸತನ್ನು ಮಾಡಲು ಆಗುವುದಿಲ್ಲ. ನಟನಾದ ನನಗೂ ಕಥೆ ಆದಷ್ಟು ಬೇಗ ಮುಗಿಯಬೇಕು, ಮತ್ತೊಂದು ಕಥೆಗೆ ಸಿದ್ಧವಾಗಬೇಕು ಎಂದು ಅನ್ನಿಸುತ್ತದೆ. ಏಕತಾನತೆ ನನಗೆ ಹಿಡಿಸುವುದಿಲ್ಲ.



■ **ರಾಘವೇಂದ್ರ ಕೆ.**